ಸಾಹಿತ್ಯ ಮಕ್ಕಳಿಗೆ ಸಂತೋಷ ಕೊಡುವುದರ ಜೊತೆಗೆ ಅದರೊಳಗೇನೇ ಒಂದಿಷ್ಟು ಜೀವನ ಮೌಲ್ಯಗಳನ್ನು ನಯವಾಗಿ ಅವರ ಮನಸ್ಸಿನಲ್ಲಿ ಬಿತ್ತುವಂತಾಗಬೇಕು. ಮನಸ್ಸನ್ನು ರಂಜಿಸುವಂತಿರಬೇಕು. ಎಳೆಯ ಮಕ್ಕಳನ್ನು ಮಲಗಿಸುವಾಗ, ಊಟ ತಿನ್ನಿಸುವಾಗ, ರಚ್ಚೆ ಹಿಡಿದ ಮಗುವನ್ನು ರಮಿಸುವಾಗ ತಾಯಂದಿರ 'ವಶೀಕರಣದ ಮಂತ್ರ' ಕಥೆ–ಕವನಗಳೇ ಆಗಿರುತ್ತವೆ ಎನ್ನುವುದನ್ನು ನಾವು ಮರೆಯುವಂತಿಲ್ಲ. ಅಂತಹ ಸೆಳೆತ, ಬೆರಗಾಗಿ ತನ್ನನ್ನು ತಾನೇ ಮರೆಯಿಸುವ ಶಕ್ತಿ ಸಾಹಿತ್ಯಕ್ಕೆ ಇರಬೇಕು. ಈ ತಂತ್ರ, ಕೌಶಲ್ಯ ಮಕ್ಕಳಿಗಾಗಿ ಬರೆಯುವವರಲ್ಲಿ ಇರಬೇಕು. ಮಕ್ಕಳು ಕಥೆ–ಕವಿತೆ–ನಾಟಕ ಓದುವುದಲ್ಲ, ಅವುಗಳೇ ಮಕ್ಕಳಿಂದ ಓದಿಸಿಕೊಂಡು ಹೋಗಬೇಕು.

ಪ್ರತಿಯೊಬ್ಬ ಹಿರಿಯರಲ್ಲೂ ಮಗು ಮನಸ್ಸು ಅನ್ನುವುದು ಸುಪ್ತವಾಗಿ ಇದ್ದೇ ಇರುತ್ತದೆ. ಮಗು ಮನಸ್ಸಿನ ಮುಗ್ಧತೆಯ ಜೊತೆಗೇನೇ ಬರೆಯುವ ಸಾಹಿತ್ಯವೂ ಸಾಗಬೇಕು. ಮಕ್ಕಳಿಗೆ ಇದು ತಮ್ಮದೇ ಅನುಭವ ಎನಿಸಿದರೆ ಉತ್ಸಾಹ ಏರುವುದು ಸಹಜ. ನಿರೂಪಣೆ ಲವಲವಿಕೆಯಿಂದ ಕೂಡಿರಬೇಕು. ಸಂಭಾಷಣೆಗಳು ಮಕ್ಕಳ ಜ್ಞಾನದ ಮಟ್ಟಕ್ಕೆ ಎಟಕುವಂತಿರಬೇಕು. ಮಕ್ಕಳ ಮನಸ್ಥಿತಿ ಅರಿಯಬೇಕಾದರೆ ನಾವು ಮಕ್ಕಳ ಮಟ್ಟದಲ್ಲೇ ಇಳಿದು ಸಾಹಿತ್ಯ ರಚಿಸಬೇಕು. ಮನರಂಜನೆಯ ಜೊತೆಗೆ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಅಗತ್ಯವಾದ ನೀತಿಗಳನ್ನು ಬೋಧನೆಯಿಲ್ಲದೆ ಸಹಜವಾಗಿ ಅವರಲ್ಲಿ ಮೂಡುವಂತೆ ಮಾಡಬೇಕು ಎನ್ನುವುದು ನನ್ನ ಅನಿಸಿಕೆ.

**5**

ಶಿಶು ಸಾಹಿತ್ಯ ಬರೆಯುವವರಿಗೆ ಮುಖ್ಯವಾಗಿ ಮಕ್ಕಳ ಮುಗ್ಧ ಭಾವಲೋಕದ ಅರಿವಿರಬೇಕು. ಮಕ್ಕಳ ಒಡನಾಟದಲ್ಲಿದ್ದರೆ ಮಕ್ಕಳು ಏನನ್ನು ಬಯಸುತ್ತಾರೆ ಎನ್ನುವುದು ತಾನಾಗಿ ಗೊತ್ತಾಗುತ್ತದೆ. ಹಾಡಿ ಕುಣಿಯಲು ಉತ್ಸಾಹವಿರುವ ಮಕ್ಕಳನ್ನು ಅಂತಹ ಪದ್ಯಗಳು ಸೆಳೆಯುತ್ತವೆ. ಮನರಂಜನೆ ಪ್ರತಿಯೊಬ್ಬ ಜೀವಿಯೂ ಬಯಸುವಂತೆ ಮಕ್ಕಳೂ ಹೆಚ್ಚಾಗಿಯೇ ಬಯಸುತ್ತಾರೆ. ಕಾರ್ಟೂನುಗಳನ್ನು ಇಷ್ಟಪಡುವ ಮಕ್ಕಳ ಸಂಖ್ಯೆ ಹೆಚ್ಚೇ ಇದೆ ಎನ್ನುವುದು ನಮ್ಮ ಕಣ್ಣೆದುರಿನ ಸತ್ಯ. ಈ ಹಾಸ್ಯ–ವಿನೋದಗಳನ್ನೇ ಬರಹಗಾರ ತನ್ನ ಕೃತಿಗಳಲ್ಲೂ ಅಳವಡಿಸಿಕೊಳ್ಳಬೇಕಾಗುತ್ತದೆ.

**6**

ಮಕ್ಕಳ ಸಾಹಿತ್ಯ ರಚನೆಯ ಬಗ್ಗೆ ನಾನು ಹಿಂದೇಟು ಹಾಕಿದ್ದು ಎಂದೂ ಇಲ್ಲ. ಪ್ರೌಢ ಸಾಹಿತ್ಯ ಬರೆಯುತ್ತಿದ್ದೇನಾದರೂ ಮಕ್ಕಳ ಸಾಹಿತ್ಯದಿಂದ ಹಿಂದೆ ಸರಿಯುವ ಆಲೋಚನೆಯೇ ಇಲ್ಲ. ಈಗಲೂ ಇನ್ನೂರಕ್ಕೂ ಹೆಚ್ಚು ಪುಟಗಳ ಸಂಕಲನ ಆಗಬಹುದಾದಷ್ಟು ಮಕ್ಕಳ ಪದ್ಯಗಳು ನನ್ನಲ್ಲಿವೆಯಾದರೂ ಪ್ರಕಾಶಕರು ಕವನ ಸಂಕಲನದ ಪ್ರಕಟಣೆಗೆ ಹಿಂಜರಿಯುತ್ತಿರುವುದೇ ಬೇಸರದ ವಿಷಯ.

**7**

ಒಂದನ್ನೇ ಹೇಗೆ ಹೇಳಲಿ? ಮೊದಲ ಮಕ್ಕಳ ಕವನ ಸಂಕಲನಕ್ಕೆ ಮುನ್ನುಡಿ ಬರೆದ ಅಣ್ಣ ಶ್ರೀನಿವಾಸ ಉಡುಪ ಅವರು, 'ಇಷ್ಟೊಂದು ಚೆಲುವಾದ ಕವಿತೆಗಳನ್ನು ರಚಿಸುವ ಸಾಮರ್ಥ್ಯವಿರುವ ಕವಯಿತ್ರಿ ಇಷ್ಟು ದೀರ್ಘ ಕಾಲ ತಮ್ಮ ಪ್ರತಿಭೆಯನ್ನು ಗುಪ್ತನಿಧಿಯಂತೆ ಅದೇಕೆ ಬಚ್ಚಿಟ್ಟುಕೊಂಡಿರಬಹುದು ಎಂಬುದೇ ಅಚ್ಚರಿಗೆ ಕಾರಣ' ಎಂದದ್ದು, ಮುನ್ನುಡಿಯ ಬೇಡಿಕೆಯಿಟ್ಟಾಗ, 'ನಿನ್ನ ಪುಸ್ತಕಕ್ಕೆ ಮುನ್ನುಡಿ ಬರೆಯುವ ಅರ್ಹತೆ ನನಗಿಲ್ಲಮ್ಮ' ಎಂದ ಮಕ್ಕಳ ಸಾಹಿತ್ಯದ ದಿಗ್ಗಜ ಪಳಕಳ ಅಣ್ಣನ ಮಾತು ಉತ್ಪ್ರೇಕ್ಷೆಯಾದರೂ ಅದು ಈಗಲೂ ನನ್ನ ಬೆನ್ನು ತಟ್ಟುತ್ತಿರುವುದು, 'ನಿನ್ನ ಚೆನ್ನಣ್ಣ' ಎಂದೇ ಬರೆಯುತ್ತಿದ್ದ ಹಿರಿಯಣ್ಣ ಚೆನ್ನವೀರ ಕಣವಿ ಅವರು ಪತ್ರದ ತುಂಬ ನನ್ನ ಸಾಹಿತ್ಯವನ್ನು ಹೊಗಳಿ ಮುಖ ಅರಳುವಂತೆ ಮಾಡುತ್ತಿದ್ದದ್ದು, 'ಮಕ್ಕಳ ಮನಸ್ಸನ್ನು ಚೆನ್ನಾಗಿ ಅರಿತಿರುವೆ' ಎಂದು ಅಣ್ಣ ನಾ. ಡಿಸೋಜ ಅವರು ಮೆಚ್ಚಿದ್ದು, ಈಗಲೂ ನನ್ನ ಕೃತಿಗಳನ್ನು ಸಂಪೂರ್ಣವಾಗಿ ಓದಿ ತಪ್ಪದೆ ಉತ್ತರಿಸುವ ಹಿರಿಯರು, ಕಿರಿಯರು... ಎಲ್ಲವೂ ಅತ್ಯುತ್ತಮ ಪ್ರಶಂಸೆಗಳೇ.

●